**CC 1321/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್ 1321/2023**

**ಸಿ ಡಬ್ಲ್ಯೂ 3**

**ಪಿ ಡಬ್ಲ್ಯೂಃ 1**

**ಸಾಕ್ಷಿಯ ಹೆಸರು - ಮಹೇಶ**
**ತಂದೆಯ ಹೆಸರು - ಹೊನ್ನೂರಪ್ಪ**
**ವಯಸ್ಸು - 34 ವರ್ಷಗಳು**
**ಉದ್ಯೋಗ - ಪೋಲಿಸ ಪೇದೆ, ಹಂಪಿ ಪ್ರವಾಸಿ ಪೋ.ಠಾ.**
**ವಾಸಸ್ಥಳ - ಹಳೆ ಮಲಪನಗುಡಿ**

**ಸಾಕ್ಷಿಯನ್ನು ದಿನಾಂಕಃ 14-08-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು ದಿಃ **03-07-2022** ರಿಂದ ಇಲ್ಲಿಯವರೆಗೆ ಹಂಪಿ ಪ್ರವಾಸಿ ಪೋಲಿಸ್ ಠಾಣೆಯಲ್ಲಿ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **19-09-2022** ರಂದು ಬೆಳಿಗ್ಗೆ **08.00** ಗಂಟೆಗೆ ಕರ್ತವ್ಯಕ್ಕೆ ಹಾಜರಾಗಿದ್ದೆ. ಚಾಸಾ **-12** ರವರು ನನ್ನನ್ನು ಮತ್ತು ಚಾಸಾ **-2** ರವರನ್ನು ಕರೆದು ಹೊಸಮಲಪನಗುಡಿಯಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ಸಾಗಾಟ ಆಗುತ್ತಿದೆ ಎಂದು ಮಾಹಿತಿ ಬಂದಿದ್ದು, ಆಟೋ ಚಾಲಕನನ್ನು ಹಿಡಿದು ತನ್ನಿ ಎಂದು ತಿಳಿಸಿದ್ದರು. ನಾವುಗಳು ಠಾಣೆಯಿಂದ ನಮ್ಮ ದ್ವಿ ಚಕ್ರ ವಾಹನದಲ್ಲಿ ಬೆಳಿಗ್ಗೆ **08.45** ಕ್ಕೆ ಬಿಟ್ಟು ಹೊಸಮಲಪನಗುಡಿಗೆ ಹೋಗಿದ್ದೇವು. ಹೊಸಮಲಪನಗುಡಿಯಲ್ಲಿ ಒಂದು ಆಟೋ ಬಂದಾಗ ಅದನ್ನು ತಡೆದು ನಿಲ್ಲಿಸಿ ವಿಚಾರಿಸಿದೆವು. ಸದರಿ ಆಟೋ ಚಾಲಕ ತನ್ನ ಹೆಸರನ್ನು ಕೊರವರ ರವಿ ತಂದೆ ದುರ್ಗಪ್ಪ, ಸಾಃ ನಾಗೇನಹಳ್ಳಿ ಎಂದು ತಿಳಿಸಿದ. ಸದರಿ ಆಟೋದಲ್ಲಿ ಪಡಿತರ ಅಕ್ಕಿ ಇದ್ದದ್ದು ಕಂಡು ಬಂದಿತ್ತು.

ಸದರಿ ಅಕ್ಕಿ ಎಲ್ಲಿಂದ ತಂದೆ ಎಂದು ಕೇಳಿದಾಗ ಆರೋಪಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ. ಆಗ ನಾವು ಆತನನ್ನು ಹಿಡಿದು ಆಟೋ ಸಮೇತ ಬೆಳಿಗ್ಗೆ 09.30 ಗಂಟೆಗೆ ಠಾಣೆಗೆ ಹೋದೆವು. ಚಾಸಾ -12 ರವರು ಆಹಾರ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಚಾಸಾ -1 ರವರು ಬೆಳಿಗ್ಗೆ 11.00 ಗಂಟೆಗೆ ನಮ್ಮ ಠಾಣೆಗೆ ಬಂದರು. ಸದರಿಯವರು ಆಟೋದಲ್ಲಿದ್ದ ಅಕ್ಕಿಯನ್ನು ಪರಿಶೀಲಿಸಿ ಪಡಿತರ ಅಕ್ಕಿ ಎಂದು ಖಾತ್ರಿ ಪಡಿಸಿದರು. ಚಾಸಾ -1 ರವರು ನಮ್ಮ ಮತ್ತು ಚಾಸಾ -12 ರವರ ಸಮಕ್ಷಮ ಆರೋಪಿಯನ್ನು ಪ್ರಶ್ನಿಸಿದಾಗ ಅಕ್ಕಿಯನ್ನು ಹೊಸಮಲಪನಗುಡಿಯ ಗ್ರಾಮಸ್ಥರ ಮನೆಗಳಿಗೆ ಹೋಗಿ ಖರೀದಿಸಿರುವುದಾಗಿ ಮತ್ತು ಅವುಗಳನ್ನು ಹೆಚ್ಚಿನ ದರಕ್ಕೆ ಮಾರುವ ಉದ್ದೇಶದಿಂದ ಖರೀದಿಸಿರುವುದಾಗಿ ತಿಳಿಸಿದ. ಸದರಿ ಅಕ್ಕಿಗೆ ಸಂಬಂಧಿಸಿ ಯಾವುದೇ ದಾಖಲೆ ಇರುವುದಿಲ್ಲ ಎಂದು ತಿಳಿಸಿದ. ಚಾಸಾ -1 ರವರು ಮುಂದಿನ ಕ್ರಮ ಕೈಗೊಳ್ಳಲು ದೂರನ್ನು ನೀಡಿದರು.

ಆಟೋದಲ್ಲಿ 8 ಅಕ್ಕಿ ಚೀಲಗಳು ಇದ್ದವು. ಠಾಣೆಗೆ ತೂಕ ಯಂತ್ರ ತರಿಸಿ ತೂಕ ಮಾಡಿ ನೋಡಿದಾಗ 1 ಚೀಲ 40 ಕೆ ಜಿಯಂತೆ ಒಟ್ಟು 3.20 ಕ್ವಿಂಟಾಲ್ ಪಡಿತರ ಅಕ್ಕಿ ಇದ್ದದ್ದು ಕಂಡು ಬಂದಿತ್ತು. ಸದರಿ ಅಕ್ಕಿಯನ್ನು ಚಾಸಾ -12 ರವರು ಪಂಚರ ಸಮಕ್ಷಮ ಜಪ್ತು ಪಡಿಸಿಕೊಂಡರು. ಸದರಿ ಚೀಲಗಳಿಂದ ಅಕ್ಕಿಯನ್ನು ತೆಗೆದು ಒಂದು ಬಿಳಿ ಚೀಲದಲ್ಲಿ ಒಂದು ಕೆ ಜಿ ಮಾದರಿಯನ್ನು ತಯಾರಿಸಿ ಸೀಲ್ ಹಾಕಿ ಪಂಚನಾಮೆ ಮಾಡಲಾಯಿತು. ಸದರಿ ಚೀಲಕ್ಕೆ ತನಿಖಾಧಿಕಾರಿಯು ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿದ್ದರು. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ನಿಪಿಃ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 1 (ಎ) ಎಂದು ಗುರುತಿಸಲಾಯಿತು.

ಸಾಕ್ಷಿ 2- ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿಃ 2 ಎಂದು ಗುರುತಿಸಲಾಯಿತು.

**CC 1321/2023**

**ಸಿ ಡಬ್ಲೂ 3**

**ಪಿ ಡಬ್ಲೂಃ 1**

ನನ್ನ ಸಮಕ್ಷಮ ಮಾದರಿ ತೆಗೆಯಲಾಗಿದ್ದ ಚೀಲ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಚೀಲವೊಂದನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾ 1 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಎಸ್ ಹೆಚ್., ವಕೀಲರಿಂದ</u>**

ನಮ್ಮ ಠಾಣೆಯಿಂದ ಕೃತ್ಯ ಸ್ಥಳ 5 ಕಿ ಮೀ ಅಂತರ ಇರುತ್ತದೆ. ನಾವು ಠಾಣೆ ಬಿಟ್ಟಾಗ ಬೆಳಿಗ್ಗೆ 08.30 ಗಂಟೆ ಆಗಿತ್ತು. ನಾವು ಠಾಣೆಯಿಂದ ನಮ್ಮ ವೈಯಕ್ತಿಕ ದ್ವಿ ಚಕ್ರ ವಾಹನದಲ್ಲಿ ಹೋಗಿದ್ದೇವು. ಸದರಿ ದ್ವಿ ಚಕ್ರ ವಾಹನದ ನೋಂದಣಿ ಸಂಖ್ಯೆಯನ್ನು ನನ್ನ ಹೇಳಿಕೆಯಲ್ಲಿ ಹೇಳಿ ಬರೆಸಿಲ್ಲ. ಆರೋಪಿಯ ಹೆಸರು ಮತ್ತು ನೋಂದಣಿ ಸಂಖ್ಯೆಯನ್ನು ನಾವು ಹೊಸಮಲಪನಗುಡಿಗೆ ಹೋಗುವುದಕ್ಕೂ ಮೊದಲೇ ಚಾಸಾ -12 ರವರು ಹೇಳಿರಲಿಲ್ಲ. ಆಹಾರ ಇಲಾಖೆಯವರನ್ನು ಯಾವ ಫೋನ್ ನಿಂದ ಕರೆ ಮಾಡಿ ಕರೆಸಲಾಗಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಹೇಳಿಕೆಯಲ್ಲಿ ಆಟೋವನ್ನು ಯಾರು ತಡೆದು ನಿಲ್ಲಿಸಿದರು ಎಂದು ನಿಖರವಾಗಿ ಬರೆಸಿಲ್ಲ ಅಂದರೆ ಸರಿ. ನಾನು ಪಡಿತರ ಅಕ್ಕಿ ಗುರುತಿಸಲು ಯಾವುದೇ ತರಬೇತಿಯನ್ನು ಪಡೆದಿರುವುದಿಲ್ಲ. ನಾನು ಆಟೋದಲ್ಲಿ ಅಕ್ಕಿ ಇದ್ದವು ಎಂಬ ಕಾರಣಕ್ಕೆ ಅದನ್ನು ಠಾಣೆಗೆ ತೆಗೆದುಕೊಂಡು ಹೋಗಿರುತ್ತೇನೆ.

ಹೊಸಮಲಪನಗುಡಿಯ ಯಾವ ಭಾಗದಲ್ಲಿ ಆಟೋವನ್ನು ನಿಲ್ಲಿಸಿದ್ದೇವು ಮತ್ತು ಆರೋಪಿಯನ್ನು ವಿಚಾರಿಸಿದ್ದೇವು ಎಂದು ನನ್ನ ಹೇಳಿಕೆಯಲ್ಲಿ ಬರೆಸಿರುವುದಿಲ್ಲ.

ಆರೋಪಿ ಯಾವ ಯಾವ ಮನೆಗಳಿಂದ ಮತ್ತು ಯಾವ ಪಡಿತರ ಚೀಟಿಗಳ ಅಡಿಯಲ್ಲಿ ಖರೀದಿಸಿದ ಅಕ್ಕಿಯನ್ನು ತಂದಿದ್ದ ಎಂದು ನಾನು ವಿಚಾರಿಸಿರುವುದಿಲ್ಲ. ಸದರಿ ಗ್ರಾಮದ ಜನರನ್ನು ಆರೋಪಿ ಅಕ್ಕಿ ಖರೀದಿಸಿದ ಬಗ್ಗೆ ವಿಚಾರಿಸಿರುವುದಿಲ್ಲ. ನನ್ನ ಹೇಳಿಕೆಯಲ್ಲಿ ಠಾಣೆಗೆ ಯಾರು ಮತ್ತು ಯಾವ ಕಂಪನಿಯ ಯಂತ್ರ ತಂದಿದ್ದರು ಎಂದು ಬರೆಸಿರುವುದಿಲ್ಲ. ಮಾದರಿ ತೆಗೆದಾಗ ಪ್ರತಿಯೊಂದು ಚೀಲದ ಫೋಟೋ ತೆಗೆದಿರುವುದಿಲ್ಲ. ಆ ದಿನ ನಾವು ಸ್ಥಳಕ್ಕೆ ಹೋಗಿಲ್ಲ, ಆರೋಪಿ ಸದರಿ ಗ್ರಾಮದಲ್ಲಿ ಇರಲಿಲ್ಲ ಮತ್ತು ನಾವುಗಳು ಆತನನ್ನು ನಿಲ್ಲಿಸಿ ವಿಚಾರಿಸಿಲ್ಲ ಅಂದರೆ ಸರಿಯಲ್ಲ.

ಠಾಣೆಯಲ್ಲಿ ಚಾಸಾ -1 ರವರು ಚಾಸಾ -12 ರವರ ಮತ್ತು ನಮ್ಮ ಸಮಕ್ಷಮ ಆರೋಪಿಯನ್ನು ಪರಶ್ನಿಸಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆಟೋದಲ್ಲಿ ಪಡಿತರ ಅಕ್ಕಿ ಇತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪಂಚರ ಸಮಕ್ಷಮ ಅಕ್ಕಿ ಜಪ್ತು ಮಾಡಿಕೊಳ್ಳಲಾಗಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸ್ಥಳದಲ್ಲಿಯೇ ಪಂಚನಾಮೆಗೆ ಮತ್ತು ಚೀಟಿಗಳಿಗೆ ಪಂಚರ ಸಹಿಗಳನ್ನು ಪಡೆಯಲಾಗಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಠಾಣೆಯ ಅಂಕಿ ಅಂಶಗಳಿಗಾಗಿ ಆರೋಪಿ ಯಾವುದೇ ಕೃತ ಮಾಡದಿದ್ದರೂ, ನನ್ನ ಮೇಲಾಧಿಕರಿಗಳು ಸುಳ್ಳು ಪುರಕಣ ದಾಖಲಿಸಿದ್ದು, ಅದಕ್ಕನುಗುಣವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ- ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.